ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ವೈ. ಘೋರ್ಪಡೆ(ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ (ಅನುಬಂಧ I).

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ). ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

* ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಪಂಚಾಯತ್‌ರಾಜ್ ವಿಧೇಯಕದ ಅನುಷ್ಠಾನ ಕರ್ನಾಟಕದಲ್ಲಿ ಅತೀ ಮುಖ್ಯವಾದಂಥ ಹೆಜ್ಜೆ. ಮತ್ತೆ ಈ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆದ ನಂತರ ಇಂಥ ಸಮಗ್ರವಾದಂಥ ತಿದ್ದುಪಡಿಯನ್ನು ಮೊದಲನೇ ಬಾರಿ ಈ ರಾಜ್ಯಮಟ್ಟದಲ್ಲಿ ನಾವು ತರುತ್ತಿದ್ದೇವೆ. ಆದ ಕಾರಣ, ಇಡೀ ರಾಷ್ಟ್ರ ಈ ನಮ್ಮ ಮಸೂದೆ ಕಡೆ ನೋಡುತ್ತಿದೆ. ಕೇಂದ್ರದ ಸಚಿವರು ಏನು ಕರ್ನಾಟಕಕ್ಕೆ ಭೇಟಿ ಕೊಟ್ಟರು, ಅವರು ಇದು ಇಡೀ ರಾಷ್ಟ್ರಕ್ಕೆ ಒಂದು ಮಾದರಿ ವಿಧೇಯಕವಾಗುತ್ತದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಆದಕಾರಣ ಈ ವಿಧೇಯಕದಲ್ಲಿ ನಾವು ಸಂಪೂರ್ಣವಾದಂಥ ವಿಕೇಂದ್ರೀಕರಣಗೊಳಿಸಿ, ಎಷ್ಟು ಅಧಿಕಾರ ಜನರಿಗೆ ಕೊಡುವುದಕ್ಕೆ ಸಾಧ್ಯ, ಆ ಪ್ರಯತ್ನವನ್ನು ನಾವು ಮಾಡಿದ್ದೇವೆ. ಮತ್ತೆ ಇದು ಇಡೀ ಕರ್ನಾಟಕಕ್ಕೆ ಒಂದು ಹೆಮ್ಮೆಯ, ಐತಿಹಾಸಿಕವಾದಂಥ ವಿಧೇಯಕವಾಗಲಿ ಎಂದು ನಮ್ಮೆಲ್ಲರ ಪ್ರಯತ್ನ. ನಾವು ಪ್ರಾಮಾಣಿಕತೆಯಿಂದ ಇದರ ಬಗ್ಗೆ ಆಳವಾಗಿ ಚರ್ಚೆ ನಡೆಸಿ ಏನಾದರೂ ನಾವು ಒಮ್ಮತದಿಂದ ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಸಾಧ್ಯವಾದರೆ ಇದರ ಒಂದು ಮಹತ್ವ ಇನ್ನಷ್ಟು ಜಾಸ್ತಿಯಾಗುತ್ತದೆ ಮತ್ತು ಕರ್ನಾಟಕದಲ್ಲಿ ಮಾಡಿದ ಪ್ರಯತ್ನ ಏನು ಇದೆ, ಇದು ಇಡೀ ರಾಷ್ಟ್ರಕ್ಕೆ ಒಂದು ಮಾದರಿಯಾಗುವುದರಲ್ಲಿ ಸಹಾಯವಾಗುತ್ತದೆ ಎಂಬ ಮಾತನ್ನು ಹೇಳಿ ಈ ಮಸೂದೆಯಲ್ಲಿರತಕ್ಕಂಥ ಮುಖ್ಯ ಅಂಶಗಳನ್ನು ನಾನು ಸಂಕ್ಷಿಪ್ತವಾಗಿ ಈ ಸದನದ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನಂತರ ಇದರ ಬಗ್ಗೆ ಚರ್ಚೆ ಮಾಡೋಣ. ಇದರಲ್ಲಿ ಏನಾದರೂ ರಚನಾತ್ಮಕವಾದಂಥ ಸಲಹೆಗಳು ನಿಮ್ಮ ಕಡೆಯಿಂದ ಬಂದರೆ ಅದನ್ನು ಸ್ವೀಕಾರ ಮಾಡುವುದರಲ್ಲಿ ನಾವು ಯಾವ ಒಂದು ಪ್ರಿಸ್ಟಿಜ್ ಪ್ರಶ್ನೆ ತರುವುದಿಲ್ಲ. ಈಗ ಈ ಹೊಸ ಆಕ್ಟ್‌ಗೆ ಕರ್ನಾಟಕ ಪಂಚಾಯತ್ ರಾಜ್ ಆಕ್ಟ್-1993 ಎಂದು ಕರೆದಿದ್ದೇವೆ. ಮತ್ತೆ ಈ ಮೂರು ಹಂತದಲ್ಲಿ ಚುನಾಯಿತ ಸಂಸ್ಥೆಗಳನ್ನು ಸ್ಥಾಪನೆ ಮಾಡುವಂಥ ನಿರ್ಧಾರ ಇದರಲ್ಲಿದೆ. ಇದು ಸಂಪೂರ್ಣವಾಗಿ 73ನೇ ಸಂವಿಧಾನದ ತಿದ್ದುಪಡಿಗೆ ಅನುಗುಣವಾಗಿ ಇದೆ. ಇಲ್ಲಿ ಹೆಸರುಗಳನ್ನು ಸ್ವಲ್ಪಮಟ್ಟಿಗೆ ನಾವು

ಬದಲಾಯಿಸಿದ್ದೇವೆ. ಅದೂ ಕೂಡ 73ನೇ ಅಮೆಂಡ್‌ಮೆಂಟ್ ಪ್ರಕಾರ ಇದೆ. ಹಳ್ಳಿ ಮಟ್ಟದಲ್ಲಿ ನಾವು ಗ್ರಾಮ ಪಂಚಾಯತಿ ಎಂದು ಕರೆಯುತ್ತೇವೆ. ಮೊದಲು ಏನು ಮಂಡಲ್ ಪಂಚಾಯತಿ ಎಂದು ಇತ್ತು, ಅದರ ಬದಲು ಗ್ರಾಮ ಪಂಚಾಯತಿ ಎಂದು ಕರೆಯುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಎಂದು ಕರೆಯುತ್ತಿದ್ದೇವೆ. ಈ ಎಲೆಕ್ಷನ್ಸ್ 1991 ಸೆನ್ಸಸ್ ಪ್ರಕಾರ ನಾವು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಲೇಟೆಸ್ಟ್ ಸೆನ್ಸಸ್ ಏನು ಇದೆ, ಆ ಆಧಾರದ ಮೇಲೆ ನಾವು ಚುನಾವಣೆಗಳನ್ನು ಮಾಡಬೇಕಾಗುತ್ತದೆ. ಸುದ್ಯೆವದಿಂದ 1991 ಸೆನ್ಸಸ್ ನಮ್ಮ ಕೈ ಸೇರಿರುವುದರಿಂದ ಆ ಆಧಾರದ ಮೇಲೆ ನಾವು ಎಲೆಕ್ಷನ್ಸ್ ಮಾಡಬೇಕಾಗುತ್ತದೆ. ಹಳೆಯ ಡೀಲಿಮಿಟೇಷನ್ ಏನು ಇದೆ, ಅದನ್ನು 1971 ಸೆನ್ಸಸ್ ಪ್ರಕಾರ ಮಾಡಿದ್ದರು. ಅದರ ಪ್ರಕಾರ ನಾವು ಖಂಡಿತವಾಗಿ ಮಾಡುವುದಕ್ಕೆ ಆಗುವುದಿಲ್ಲ. ಇತ್ತೀಚಿನ ಲೇಟೆಸ್ಟ್ ಸೆನ್ಸಸ್ ಏನು ಇದೆ, ಆ ಆಧಾರದ ಮೇಲೆಯೇ ನಾವು ಡೀಲಿಮಿಟೇಷನ್ ಮತ್ತು ಎಲೆಕ್ಷನ್ಸ್ ಮಾಡಬೇಕಾಗುತ್ತದೆ. ಈ ಗ್ರಾಮ ಪಂಚಾಯತಿಯಲ್ಲಿ ಅದರ ಜನಸಂಖ್ಯೆಯ ಮಿತಿಯನ್ನು ಇಳಿಸಿದ್ದೇವೆ. ಐದು ಸಾವಿರದಿಂದ ಏಳು ಸಾವಿರಕ್ಕೆ ಇಳಿಸಿದ್ದೇವೆ. ಈಗ ಇರತಕ್ಕ ಕಾನೂನಿನಲ್ಲಿ 1971ನೇ ಸೆನ್ಸಸ್ ಪ್ರಕಾರ 8 ಸಾವಿರದಿಂದ 12 ಸಾವಿರ ಇತ್ತು. ಆದರೆ ಈಗ ನಾವು 1991ನೇ ಸೆನ್ಸಸ್ ಪ್ರಕಾರ 5 ಸಾವಿರದಿಂದ 7 ಸಾವಿರ ಎಂದು ಮಾಡಿದ್ದೇವೆ. ಮಲೆನಾಡು ಭಾಗದಲ್ಲಿ 2500 ಜನಸಂಖ್ಯೆ ಇರಬಹುದು ಎಂದು ಮಾಡಿದ್ದೇವೆ. ಮತ್ತೆ ಇದರಲ್ಲಿ ಕೂಡ ಸ್ವಲ್ಪ ವ್ಯತ್ಯಾಸ ಮಾಡುವ ಅಧಿಕಾರವನ್ನು ಈ ಬಿಲ್‌ನಲ್ಲಿ ಇಟ್ಟುಕೊಂಡಿದ್ದೇವೆ. ಏಕೆಂದರೆ, ಕೆಲವು ಕಡೆ ನಾಲ್ಕು ಸಾವಿರ ಮಾಡಬಹುದು ಎಂದು ಬರಬಹುದು ಅಥವಾ ಎಂಟು ಸಾವಿರ ಮಾಡಬಹುದು ಎಂದು ಬರಬಹುದು. ಆ ಅಧಿಕಾರ ಕೂಡ ಇದರಲ್ಲಿ ಇದೆ. ಇದರ ಪರಿಣಾಮವಾಗಿ ಏನು ಆಗುತ್ತದೆ ಎಂದರೆ, ಈಗ 2534 ಮಂಡಲ್ ಪಂಚಾಯತಿಗಳು ಕರ್ನಾಟಕದಲ್ಲಿ ಏನಿವೆ, ಅವು ಹೆಚ್ಚು ಕಡಿಮೆ ಐದು ಸಾವಿರ ಆಗುತ್ತವೆ. ಅಂದರೆ ಈಗ ಇರುವ 2534 ಮಂಡಲ್ ಪಂಚಾಯತಿಗಳು ಹೋಗಿ ಅದರ ಜಾಗದಲ್ಲಿ ಹೆಚ್ಚು ಕಡಿಮೆ ಐದು ಸಾವಿರ ಗ್ರಾಮ ಪಂಚಾಯತಿಗಳು ಸ್ಥಾಪನೆ ಆಗುತ್ತವೆ. ಆದರೆ ಮೂಲಭೂತವಾದ ತತ್ವ ಏನು ಇದೆ, ಅಂದರೆ ನಾಲ್ಕು ನೂರು ಜನಸಂಖ್ಯೆಯಿಂದ ಒಬ್ಬರನ್ನು ಆರಿಸಬೇಕು, 400 ಪಾಪ್ಯುಲೇಷನ್‌ಗೆ ಒಬ್ಬ ಎಲೆಕ್ಟೆಡ್ ಮೆಂಬರ್ ಎಂದು ಏನಿದೆ ಅದು ಅದೇ ರೀತಿ ಇದೆ. ಅದನ್ನು ನಾವು ಬದಲಾಯಿಸುವುದಿಲ್ಲ. ಏಕೆಂದರೆ ಅದು ಪ್ರಗತಿಪರವಾದ ಅಂಶ. ಕಾನ್ಸ್‌ಟಿಟ್ಯೂಷನ್‌ನಲ್ಲೂ ಕೂಡ ಅದೇ ರೀತಿ ಇದೆ. ಆದಕಾರಣ 400 ಪಾಪ್ಯುಲೇಷನ್‌ಗೆ ಒಬ್ಬರು ಮೆಂಬರ್ ಆಗುತ್ತಾರೆ. ಈಗ ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ 10 ಸಾವಿರ ಜನಸಂಖ್ಯೆಗೆ ಒಬ್ಬರು ಮೆಂಬರ್ ಎಂದು ನಾವು ಆರಿಸುತ್ತೇವೆ. ಈಗ ಅದಕ್ಕೆ ಬರುವುದಕ್ಕಿಂತ ಮುಂಚೆ ಈ ಗ್ರಾಮ ಪಂಚಾಯತಿ ಮಟ್ಟಕ್ಕೆ ಹೇಳಬೇಕಾದರೆ ಛೇರ್ಮನ್ ಅವರನ್ನು ನೇರವಾಗಿ ಆರಿಸಬೇಕೇ? ಮೆಂಬರ್ಸ್‌ನಿಂದ ನೇರವಾಗಿ ಆರಿಸಬೇಕೇ? ಅಥವಾ ಡೈರೆಕ್ಟ್ ಎಲೆಕ್ಷನ್ ಏಕೆ ಮಾಡಬಾರದು ಎಂಬ ವಿಚಾರ ನಮ್ಮ ಪಕ್ಷದಲ್ಲಿ ಕೂಡ ಇದೆ, ಹಾಗೂ ಎಲ್ಲಾ ಕಡೆ ಇದೆ. ಇದರ ಬಗ್ಗೆ ಎರಡು ಅಭಿಪ್ರಾಯಗಳಿವೆ. ನಾವು ಈಗ ಮಂಡಿಸಿದ ಮಸೂದೆಯಲ್ಲಿ ಇಂಡೈರೆಕ್ಟಾಗಿ ಇಟ್ಟಿದ್ದೇವೆ. ಆದರೆ ಆ ಛೇರ್ಮನ್ ಡೈರೆಕ್ಟಾಗಿ ಆರಿಸಬೇಕು ಎಂಬ ಒಂದು ಅಭಿಪ್ರಾಯಕ್ಕೆ ತಾವು ಬರುವುದಾದರೆ ಅದರ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ ಅದರ ಬಗ್ಗೆ ಚರ್ಚೆ ಆಗಲಿ. ಚರ್ಚೆ ಆದ ನಂತರ ನಾವು ಒಂದು ತೀರ್ಮಾನಕ್ಕೆ ಬರಲಿಕ್ಕೆ ಸಾಧ್ಯ ಆಗುತ್ತದೆ. ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ಹತ್ತು ಸಾವಿರಕ್ಕೆ ಒಬ್ಬ ಮೆಂಬರ್ ಎಂದರೆ ಹೆಚ್ಚು ಕಡಿಮೆ ಎರಡು ಲಕ್ಷ ಜನಸಂಖ್ಯೆ ಇದ್ದರೆ 15-20 ಜನ ಮೆಂಬರ್ಸ್ ಆಗುತ್ತಾರೆ. ಮತ್ತೆ ಕೆಲವು ಕಡೆ ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಇದ್ದರೆ ಆಗ ಮೆಂಬರ್ಸ್ ಬಹಳ ಕಡಿಮೆ ಆಗಬಹುದು ಎಂದು ಹೇಳಿ ಅಂತಹ ಕಡೆ ಕನಿಷ್ಟ 11 ಮೆಂಬರ್ಸ್ ಆದರೂ ಇರಬೇಕು ಎಂದು 5TH